**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 23/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 8**

**ದಿನಾಂಕಃ 29.07.2026** **ಸಿಡಬ್ಲ್ಯೂ 11**

| | |
|---|---|
| ಹೆಸರು | ಡಾ|| ವಿಜಯಕುಮಾರ ಜತ್ತಿ |
| ತಂದೆಯ ಹೆಸರು | ಬಸಣ್ಣ |
| ವಯಸ್ಸು | 47 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು , ಸಿಟಿ ಸೆಂಟ್ರಲ್ ಆಸ್ಪತ್ರೆ |
| ವಾಸ ಸ್ಥಳ | ದಾವಣಗೆರೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2006 ರಿಂದ ಇಲ್ಲಿಯವರೆಗೆ ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ04.11.2024 ರಂದು 6 ಗಂಟೆ ಸಮಯದಲ್ಲಿ 3 ಜನ ಗಾಯಾಳುಗಳು ರಸ್ತೆ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಪ್ರಿಯಾಂಕರವರಿಗೆ

1. ಬಲಭಾಗದ ತಲೆಯ ಹಿಂಭಾಗದಲ್ಲಿ ನೋವು ಭರಿತ ಬಾವು

ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ.

2. ಬಲತೋಳುಗೈಯಲ್ಲಿ ನೋವು ಭರಿತ ಊತ ಕಂಡು ಬಂದಿರುತ್ತದೆ.

ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ.

ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಎರಡನೆಯದಾಗಿ ಉಜ್ವಲ್ ಗೌಡ ಇವರನ್ನು ಪರೀಕ್ಷಿಸಿದಾಗ ಅವರಿಗೆ

1. ಎಡಕಾಲಿನ ನೋವಿನಿಂದ ಕೂಡಿದ ಊತ ಕಂಡು ಬಂದಿರುತ್ತದೆ

ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ.

ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಮೂರನೆಯದಾಗಿ ಶ್ರೀಜಾ ಇವರನ್ನು ಪರೀಕ್ಷಿಸಿದಾಗ ಅವರಿಗೆ

1. ಎದೆಯ ಬಲಭಾಗದ ನೋವಿನಿಂದ ಕೂಡಿದ ಊತ ಕಂಡು ಬಂದಿರುತ್ತದೆ

ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ.

2. ಎಡಮೊಣಕಾಲಿನ ಮೇಲೆ ತರಚಿದ ಗಾಯಗಳು ಇರುತ್ತವೆ

ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿಗುರುತಿಸಿದ್ದು ಅವುಗಳನ್ನು ನಿಪಿ.15 ಬಿ ಯಿಂದ 17 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎ ವಿ ಎಂ ವಕೀಲರಿಂದಃ

ಸಾಮಾನ್ಯವಾಗಿ ಗಾಯಾಳುಗಳು ಹೇಳುವ ಹೇಳಿಕೆಯ ಮೇರೆಗೆ ಘಟನೆಯ ವಿವರಣೆ ಮತ್ತು ಸಮಯ ನಮೂದಿಸುತ್ತೇವೆ ಎಂದರೆ ಸರಿ. ಕಾರು ವೇಗವಾಗಿ ಬಂದು ಗುಂಡಿಯಲ್ಲಿ ಹಾಯ್ದುಹೋದಾಗ ಗಾಯಾಳುಗಳಿಗೆ ನಿಪಿ15 ರಿಂದ 17 ರವರೆಗೆ ಇರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.